# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

'ವಿಜ್ಞಾನ ಭವನ' ನಂ: 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070

ದೂರವಾಣಿ: 080-26711166 ಇ-ಮೇಲ್: ksteps.dst@gmail.com


24 JAN 2022 6335

ಸಂಖ್ಯೆ: ಕೆಸ್ಟೆಪ್ಸ್/ಐ-ಸ್ಟೆಂ/2021-22 ದಿನಾಂಕ: 16.12.2021

ಮಾನ್ಯರೇ,

ವಿಷಯ: ಭಾರತ ಸರ್ಕಾರದ ರಾಷ್ಟ್ರೀಯ ಆನ್‌ಲೈನ್ ವೆಬ್ ಪೋರ್ಟಲ್ 'Indian Science, Technology and Engineering Facilities Map (I-STEM) ಕುರಿತು.

*****

ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಛೇರಿಯು ರಾಷ್ಟ್ರೀಯ ಆನ್‌ಲೈನ್ ವೆಬ್ ಪೋರ್ಟಲ್ 'Indian Science, Technology and Engineering Facilities Map (I-STEM) ಅನ್ನು ಸ್ಥಾಪಿಸಿದ್ದು, ಸದರಿ ಪೋರ್ಟಲ್ ನಲ್ಲಿ ಸಾರ್ವಜನಿಕ ನಿಧಿಯಿಂದ ದೇಶದಾದ್ಯಂತ ಶೈಕ್ಷಣಿಕ ಮತ್ತು ಸಂಶೋಧನಾ ಹಾಗೂ ಅಭಿವೃದ್ಧಿ ಪ್ರಯೋಗಾಲಯಗಳಲ್ಲಿ ಖರೀದಿಸಲಾದ ಎಲ್ಲಾ ವೈಜ್ಞಾನಿಕ, ತಾಂತ್ರಿಕ/ವಿಶ್ಲೇಷಣಾತ್ಮಕ/ಸಂಶೋಧನಾ ಉಪಕರಣಗಳು/ ಸೌಲಭ್ಯಗಳನ್ನು ಪಟ್ಟಿ ಮಾಡಲ್ಪಟ್ಟಿದೆ.

I-STEM ಪೋರ್ಟಲ್ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸಂಶೋಧಕರಿಗೆ ತಾಂತ್ರಿಕ ಸಹಾಯವನ್ನು ಒದಗಿಸುವ ಮೂಲಕ ತಮ್ಮ ಸಂಶೋಧನೆಯನ್ನು ನಡೆಸಲು ಬೆಂಬಲಿಸುತ್ತದೆಯಲ್ಲದೆ, ಅಗತ್ಯವಿರುವ ಸಂಶೋಧನಾ ಮತ್ತು ಅಭಿವೃದ್ಧಿ ಸಂಪನ್ಮೂಲಗಳು / ಸೌಲಭ್ಯಗಳಿಗೆ ಸಂಪರ್ಕವನ್ನು ಒದಗಿಸುತ್ತದೆ. ಸದರಿ ಪೋರ್ಟಲ್ ಮುಖಾಂತರ ಭಾರತದಲ್ಲಿನ ಯಾವುದೇ ಸಂಸ್ಥೆಯಲ್ಲಿರುವ ಉಪಕರಣಗಳನ್ನು ಬಳಸಲು ಸಮಯದ ಸ್ಲಾಟ್ (Time slot) ಅನ್ನು ಕಾಯ್ದಿರಿಸಿ ಸಂಶೋಧಕರು ಉಪಯೋಗಿಸಬಹುದಾಗಿದೆ. ಅಲ್ಲದೆ, I-STEM ಪೋರ್ಟಲ್ ಮುಖಾಂತರ ಶೈಕ್ಷಣಿಕ ಸಂಸ್ಥೆಗಳು ತಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ಸಾಧನಗಳು/ಸಲಕರಣೆಗಳನ್ನು ಚಲಾಯಿಸಲು ತಾಂತ್ರಿಕ ಸಹಾಯವನ್ನು ಒದಗಿಸುತ್ತದೆ ಹಾಗೂ ಅವರನ್ನು ಸಂಶೋಧಕರು/ನವೋದ್ಯಮಗಳು/ಕೈಗಾರಿಕೆಗಳು/ಪೂರೈಕೆದಾರರು/ಸೇವಾ ಪೂರೈಕೆದಾರರೊಂದಿಗೆ ಸಂಪರ್ಕಿಸುವ ಮೂಲಕ ಬೆಂಬಲಿಸುತ್ತದೆ.

I-STEM ದೇಶೀಯವಾಗಿ ಅಭಿವೃದ್ಧಿಪಡಿಸಿಸಲಾದ ತಂತ್ರಜ್ಞಾನಗಳು ಮತ್ತು ಉತ್ಪನ್ನಗಳ ಡಿಜಿಟಲ್ ವಿಷಯ ಪಟ್ಟಿಯನ್ನು (digital catalogue) ಸ್ಥಾಪಿಸಿದೆ. ಶೈಕ್ಷಣಿಕ ಸಂಸ್ಥೆಗಳು ಹೆಚ್ಚಿನ ಭಾಗವಹಿಸುವಿಕೆಯನ್ನು ಸಾಧಿಸಲು ಅನುವಾಗಲು ತಮ್ಮ ವೆಬ್‌ನಾರ್‌ಗಳು/ಕಾನ್ಫರೆನ್ಸ್‌ಗಳು/ಸಭೆಗಳು/ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಜಾಹೀರಾತು ನೀಡಲು ಪೋರ್ಟಲ್ ಅನುವು ಮಾಡಿಕೊಡುತ್ತದೆ. ಇದಲ್ಲದೆ, ಶೈಕ್ಷಣಿಕರು ಯಾವುದೇ ವೆಚ್ಚವಿಲ್ಲದೆ ವೆಬ್‌ನಾರ್‌ಗಳು ಮತ್ತು ಸಭೆಗಳನ್ನು ನಡೆಸಲು ವೆಬೆಕ್ಸ್ (Webex) ಆನ್‌ಲೈನ್ ಮೀಟಿಂಗ್ ಪ್ಲಾಟ್‌ಫಾರ್ಮ್ ಅನ್ನು ಸಹ ಬಳಸಬಹುದಾಗಿದೆ. ಮುಂದುವರಿದು, ಈ ಪೋರ್ಟಲ್ ವಿದ್ಯಾರ್ಥಿಗಳಿಗಾಗಿ ಖಾಲಿ ಹುದ್ದೆಗಳನ್ನು (ಉದಾಹರಣೆಗೆ ಇಂಟರ್ನ್‌ಶಿಪ್‌ಗಳು) ಪ್ರದರ್ಶಿಸುವ ಸೌಲಭ್ಯವನ್ನು ಒದಗಿಸುವುದಲ್ಲದೇ, ಸಂಸ್ಥೆಗಳು ತಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ಸೌಲಭ್ಯಗಳಿಗಾಗಿ (R&D facilities) ನುರಿತ ಮಾನವಶಕ್ತಿಯನ್ನು ಹುಡುಕುವ ಆಯ್ಕೆಯನ್ನು ಸಹ ಒದಗಿಸುತ್ತದೆ. I-STEM ಪೋರ್ಟಲ್ ಜಾಲತಾಣದ ವಿವರ ಈ ಕೆಳಕಂಡಂತಿದೆ: https://www.istem.gov.in


Registrar's Personal Section In No. 343

Vice Chancellor's Personal Section No. 620


--2